Sri H. SIDDAVEERAPPA.—Not that I am aware of.

Sri P. R. RAMAIYA.—Who is the person or persons to test the quality of the materials supplied ?

Sri H. SIDDAVEERAPPA.—Normally the concerned department.

Sri P. R. RAMAIYA.—Have any reports been received by the Government that the materials supplied are not of good quality ?

Sri H. SIDDAVEERAPPA.—I want notice for that.

Sri K. PUTTASWAMY.—Is it a fact that the Stores Purchase Committee is a stumbling block of all progress ?

Sri H. SIDDAVEERAPPA.—It is not in the manner that my friend has suggested.

Sri K. PUTTASWAMY.—Is it not a fact that every time works are held up because the Stores Purchase Committee does not act in time ?

Sri H. SIDDAVEERAPPA.—The Stroes Purchase Committee has to act within certain circumscribed limitations and rules. They act as effective check and therefore they will have to see that all the provisions as mentioned in the Act or in the Manual are rigidly carried out.

ಶ್ರೀ ಜಿ. ಶಿವಪ್ಪ.—ಪ್ರತಿಯೊಂದು ವರ್ಷವೂ ಪ್ರತಿಯೊಂದು ಇಲಾಖೆಗೂ ಅಲಾಟ್‌ಮಾಡತಕ್ಕ ಹಣ ಸಕಾಲಕ್ಕೆ ಮಂಜೂರಾಗದೆ ಅದು ಸರ್ಕಾರಕ್ಕೆ ಲ್ಯಾಪ್ಸ್ ಆಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

Sri H. SIDDAVEERAPPA.—They will have to call for quotations and tenders and several other things. Hon'ble Members may themselves see from the transactions and the work turned out by the Stores Purchase Committee with what tremendous responsibility they dischrage their duties. In the year 1951-52 they placed orders for nearly 2½ crores of rupees worth of goods.

ಶ್ರೀ ಜಿ. ಶಿವಪ್ಪ.—ಫರ್ನೀಚರ್‌ಗೋಸ್ಕರವಾಗಿ ಮಂಜೂರಾಗಿರತಕ್ಕ ಹಣವೇಕೆ ಲ್ಯಾಪ್ಸ್ ಆಯಿತು?

ಶ್ರೀ ಎಚ್. ಸಿದ್ದವೀರಪ್ಪ.—ಅದಕ್ಕೆ ಈ ಸ್ಟೋರ್ಸ್ ಪರ್ಚೇಜ್ ಸಮಿತಿಯೊಂದೇ ಕಾರಣವಲ್ಲ.

Loans disbursed by the Department of Industries and Commerce.

Q.—409. Sri K. PRABHAKAR (Nelamangala—Scheduled Castes).—Will the Government be pleased to state :—

The amount of money spent by the Department of Industries and Commerce by way of loans disbursed so far as per the rules on State Aid to Industries Act in Mysore ?

A.—Sri H. SIDDAVEERAPPA (Minister for Home and Industries).—

Nil.

ಶ್ರೀ ಕೆ. ಪ್ರಭಾಕರ್.—ಹಾಗೆ ಹಣ ಖರ್ಚಾಗದಿರಲು ಕಾರಣವೇನು?

ಶ್ರೀ ಎಚ್. ಸಿದ್ದವೀರಪ್ಪ.—ಅವರಿನ್ನೂ ಡ್ಯಾಮಾ ಡಿಲ್ಲ. ಅದಕ್ಕೇ ಹಣ ಖರ್ಚಾಗಿಲ್ಲ.

ಶ್ರೀ ಕೆ. ಪ್ರಭಾಕರ್ – ಸ್ಟೇಟಿನಲ್ಲಿ ಈ ಇಂಡಸ್ಟ್ರಿಯಲ್ ರೂಲ್ಸ್‌ಮಾಡಿ ಒಂದು ವರ್ಷದಮೇಲಾದರೂ ಅವು ಸರಿಯಾಗಿ ಕೆಲಸಮಾಡುತ್ತಿವೆಯೇ, ಇಲ್ಲವೇ ಎಂಬುದನ್ನೇನಾದರೂ ಚೆಕ್‌ಮಾಡಿ ನೋಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ನಮ್ಮ ಸರ್ಕಾರದ ಅಧಿಕಾರಿಗಳು ಚೆಕ್‌ಮಾಡಲು ಎಲ್ಲ ಕಾರ್ಯಕ್ರಮಗಳನ್ನೂ ಕೈಕೊಂಡಿದ್ದಾರೆ.

ಶ್ರೀ ಕೆ. ಪ್ರಭಾಕರ್.—ಒಂದು ಕಡೆಯಲ್ಲಿ ಕೇವಲ ಫಾರ್ಮಾಲಿಟೀಸ್ ಅನುಸರಿಸುವುದರಲ್ಲೇ ಕಾಲಹರಣವಾಗಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

Sri H. SIDDAVEERAPPA.—They must satisfy themselves that the loan has to be sanctioned. They cannot simply allow it to be expedited unless they are satisfied that the terms of the Act are complied with. I am very happy to say that the committee has been functioning very efficiently.

Uniformity in the scales of pay in Aided and Government Schools.

Q.—674. Sri D. M. GOVINDARAJU (Nelamangala).—

Will the Government be pleased state :—

(*a*) the number of Municipal, District Board, Aided and Government High Schools in the State ;

(*b*) the scales of pay obtaining in the Municipal High Schools and in Government High Schools at present ;

(*c*) the amount spent by them on Government High Schools, the

(SRI D. M. GOVINDARAJU.)

amount spent on Municipal High Schools and on Aided High Schools;

(*d*) the extra expenditure that would be incurred if the scales of pay obtaining in Government Schools are extended to Municipal Schools also;

(*e*) whether they are aware of the suggestion received from the Central Government regarding uniform scales of pay to be introduced both in the Aided and in Government Schools;

(*f*) (i) the amount of grants paid at present to the Municipal High Schools and (ii) the several items for which such grants are given?

A.—Sri A. G. RAMACHANDRA RAO (Minister for Law and Education).—

(*a*) 1. Government High Schools .. 39
2. Municipal High Schools .. 65
3. District Board High Schools .. 45 (of which 8 are unaided).
4. Aided High Schools 63

(*b*) The scales of pay obtaining in Government High Schools are:—

		Rs.
1.	Head Masters	200—20—300
2.	Assistant Masters ..	130—10—200 (Senior scale) 60—5—90/E. B. 6—150
3.	Pandits and Moulvis ..	120—10—200 (Senior scale) 60—5—100—6—130
4.	Drawing Masters ..	40—4—80—5—100
5.	Music Teachers	40—3—70—5—100
6.	Drill Instructors	40—2—50—3—80
7.	Clerks	60—5—90/E. B. 6—150 (I Division) 40—2—50/E. B. 3—80 (II Division)

The scales of pay obtaining in Municipal High Schools are:—

1.	Head Masters—(i) Rs. 170—10—250 (Senior scale). The total number of places in this grade is ten. (ii) Rs. 130—10—200.	
2.	Assistant Masters ..	60—5—90/E. B. 6—150
3.	Pandits and Moulvis ..	60—5—100—6—130
4.	Drawing Masters ..	40—4—80—5—100
5.	Drill Instructors ..	40—2—50—3—80
6.	Clerks	40—2—50/E. B. 3—80

(*c*) Since the amounts spent on Municipal High Schools and Aided High Schools are not separately available, the budget provision for 1952-53 is indicated:—

	Rs.
Budget provision for Government High Schools ..	15,08,800
Budget provision for Municipal High Schools ..	4,65,147
Budget provision for Aided High Schools	4,92,841

(*d*) Extra cost to Government if the Head Masters are given the grades obtaining in Government Schools—Rs. 48,750 per year.

(*e*) No.

(*f*) (i) The amounts of grants paid to Municipal High Schools and (ii) the several items for which grants are paid are referred in item No. (ii) below.—

(i) Towards the first three items a sum of Rs. 4,65,147 (Maintenance grants—Rs. 3,60,147, Dearness Allowance

Rs. 88,000, Training of Municipal High School Teachers Rs. 17,000) is provided in the Budget, for the Municipal High Schools. Towards items 4 and 5 referred to in item No. (ii) below, no separate provision exists exclusively for Municipal High Schools. The budget provision of Rs. 40,000 towards compensation for loss of fee-income and Rs. 5,000 for equipment is for all Aided High Schools including the Municipal High Schools. Towards item No. 6 (referred to in item No. (ii) below) Building Grants, a provision of Rs. 2,58,992 is made in the Budget for payment of building grants to certain Municipal High Schools.

(ii) 1. Maintenance grant.
2. Dearness Allowance Grant.
3. Grant towards cost of training of teachers.
4. Grant towards compensation for loss of fee-income.
5. Equipment grant.
6. Building grant.

ಶ್ರೀ ಡಿ. ಎಂ. ಗೋವಿಂದರಾಜು.—ಸರ್ಕಾರಿ ಸ್ಕೂಲುಗಳು ಮತ್ತು ಮುನಿಸಿಪಲ್, ಜಿಲ್ಲಾಬೋರ್ಡ್ ಸ್ಕೂಲುಗಳು ಇವುಗಳೆಲ್ಲವೂ ಮಾಡುತ್ತಿರುವ ಕೆಲಸ ಒಂದೇ ಅಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಡಿ. ಎಂ. ಗೋವಿಂದರಾಜು.—ಹಳ್ಳಿಯ ಜನರ ವಿದ್ಯಾ ಸೌಕರ್ಯಗಳಿಗೆ ತಾವೇನು ಸಹಾಯಗಳನ್ನು ಒದಗಿಸಿದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲಲ್ಲೇ ಸ್ಕೂಲುಗಳನ್ನೇರ್ಪಡಿಸಿ, ಪಾಠ ಹೇಳುವಂತೆ ಮಾಡುವ ಸೌಲಭ್ಯಗಳನ್ನೊದಗಿಸಲಾಗಿದೆ.

ಶ್ರೀ ಡಿ ಎಂ. ಗೋವಿಂದರಾಜು.—ಈ ಎಲ್ಲಾ ಶಾಲೆಗಳ ಉಪಾಧ್ಯಾಯರುಗಳ ಸಂಬಳ ಸಾರಿಗೆಗಳೂ ಒಂದೇ ದರ್ಜೆಯಲ್ಲಿರಬೇಕೆಂಬುದು ಸೂಕ್ತವಾದುದಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಆಯಾ ಸಂಸ್ಥೆ ಎಷ್ಟೆಷ್ಟುಮಟ್ಟಿನ ಜವಾಬ್ದಾರಿ ಹೊರಲು ಸಾಧ್ಯವಿದೆಯೋ ಅದನ್ನು ಅವಲಂಬಿಸಿಕೊಂಡು ಹೋಗ ತಕ್ಕ ವಿಚಾರ.

ಶ್ರೀ ಡಿ. ಎಂ. ಗೋವಿಂದರಾಜು.—ಈಗ ವಿದ್ಯಾಭ್ಯಾಸದ ಸುಧಾರಣೆ ಆಗುತ್ತಿರುವುದರಿಂದ ತಮಗೆ ಈ ಬಗ್ಗೆ ಯಾವ ಸೂಚನೆಗಳೂ ಬಂದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನಮಗೆ ಹಾಗೆ ಅವರಿಂದ ಯಾವ ಡೈರೆಕ್ಷನ್ನೂ ಬಂದಿಲ್ಲ. ರಿಫಾರಂ ಸಮಿತಿಯವರೂ ಕೆಲವು ವಿಷಯಗಳನ್ನು ಹೇಳಿದ್ದಾರೆ.

ಶ್ರೀ ಡಿ. ಎಂ. ಗೋವಿಂದರಾಜು.—ಈಗ ಆಸ್ಪತ್ರೆಯಲ್ಲಿ ಕೆಲಸಮಾಡುವ ನೌಕರರಿಗೆ ಖಜಾನೆಯಿಂದ ಸಂಬಳವನ್ನು ಡ್ರಾ ಮಾಡುತ್ತೀರಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆಸ್ಪತ್ರೆಗೂ ಸ್ಕೂಲುಗಳಿಗೂ ಯಾವ ಸಂಬಂಧವೂ ಇಲ್ಲ.

ಶ್ರೀ ಡಿ. ಎಂ. ಗೋವಿಂದರಾಜು.—ಅದೇ ರೀತಿಯಾಗಿ ಈ ಮುನಿಸಿಪಲ್ ಸ್ಕೂಲುಗಳಲ್ಲಿ ಕೆಲಸಮಾಡತಕ್ಕ ಉಪಾಧ್ಯಾಯರಿಗೂ ಖಜಾನೆಯಿಂದಲೇ ಸಂಬಳಕೊಡುವಂತೆ ಮಾಡಲು ಆಗುವುದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲಿ ಒಂದು ಮ್ಯಾನೇಜಿಂಗ್ ಸಮಿತಿಯಿದೆ. ಅವರು ಆ ಕಾರ್ಯಕ್ರಮವನ್ನು ಕೈಗೊಳ್ಳಬೇಕು.

ಶ್ರೀ ಡಿ. ಎಂ. ಗೋವಿಂದರಾಜು.—ಹಿಂದೆ ಈ ಉಪಾಧ್ಯಾಯರುಗಳಿಗೆ ಸರ್ಕಾರಿ ಶಾಲೆಗಳಲ್ಲಿ ಕೊಡುತ್ತಿರುವಂತೆ ಸಂಬಳಸಾರಿಗೆ ಕೊಡುತ್ತೇವೆಂದು ಹೇಳಿರತಕ್ಕದ್ದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿಲ್ಲ.

ಶ್ರೀ ಡಿ. ಎಂ. ಗೋವಿಂದರಾಜು.—ಈ ಶಾಲೆಯ ಉಪಾಧ್ಯಾಯರಿಗೆ ಕಾಲಕಾಲಕ್ಕೆ ಸರಿಯಾಗಿ ಬಡ್ತಿ ಕೊಡಲಾಗುತ್ತೆಂದು ಹೇಳಿರಲಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲವು ಕಡೆ ಕೊಟ್ಟಿದ್ದಾರೆ. ಇನ್ನೂ ಕೆಲವು ಕಡೆ ಕೊಡುವುದರಲ್ಲಿದ್ದಾರೆ.

ಶ್ರೀ ಡಿ. ಎಂ. ಗೋವಿಂದರಾಜು.—C. R. B. ರೂಲ್ಸುಗಳ ಪ್ರಕಾರ ಇವರಿಗೆ ಭಡ್ತಿ ಕೊಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೊಡುತ್ತಿದ್ದಾರೆ.

ಶ್ರೀ ಡಿ. ಎಂ. ಗೋವಿಂದರಾಜು.—ಸಾಲೀಯಾನಾ ನೌಕರಿಗೆ ಸೇರಿದ ತಾರೀಖಿನಿಂದ ಏಕೆ ಬಡ್ತಿ ಕೊಡುತ್ತಿಲ್ಲ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಂಥ ತೊಂದರೆಗಳು ಯಾರಿಗಾದರೂ ಆಗಿದ್ದರೆ, ಅವುಗಳನ್ನು ತಾವು ನನ್ನ ಗಮನಕ್ಕೆ ತಂದರೆ ಸರಿಪಡಿಸಲಾಗುತ್ತದೆ.

ಶ್ರೀ ಡಿ. ಎಂ. ಗೋವಿಂದರಾಜು.—ಈ ನೌಕರರನ್ನು ತಾವು ಯಾವಾಗ ಎಷ್ಟು ವರ್ಷಗಳಲ್ಲಿ ವರ್ಗಮಾಡುತ್ತೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಗತ್ಯಬಿದ್ದಾಗ ವರ್ಗಮಾಡಲಾಗುತ್ತದೆ.

ಶ್ರೀ ಡಿ. ಎಂ. ಗೋವಿಂದರಾಜು.—ಶಾಲೆಯ ಹಿತದೃಷ್ಟಿಯಿಂದ ಹಾಗೆ ವರ್ಷದ ಮಧ್ಯದಲ್ಲಿ ವರ್ಗಮಾಡುವುದನ್ನು ಬಿಟ್ಟು ಸ್ಕೂಲುಗಳು ಬೇಸಿಗೆ ರಜಾ ಕಳೆದ ನಂತರ ಪ್ರಾರಂಭವಾಗುವ ಕಾಲದಲ್ಲಿ ವರ್ಗಮಾಡುವುದು ಒಳ್ಳೆಯದಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲೂ ಈಗ ಅದೇ ನಿಯಮವನ್ನು ಇಟ್ಟುಕೊಂಡಿದೆ.

ಶ್ರೀ ಡಿ. ಎಂ. ಗೋವಿಂದರಾಜು.—ಈಗ ಸಾಮಾನ್ಯವಾಗಿ ಹಳ್ಳಿ ಬಾಲಕರು ಎಲ್ಲಿ ವಿದ್ಯಾಭ್ಯಾಸಮಾಡುತ್ತಾರೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಳ್ಳಿಗೆ ಸಮೀಪವಾಗಿ ಸ್ಕೂಲಿದ್ದರೆ ಅಲ್ಲಿ ಮಾಡುತ್ತಾರೆ. ಪಟ್ಟಣಗಳಿಗೆ ಸಮೀಪದಲ್ಲಿರುವ ಹಳ್ಳಿಗಳ ಹುಡುಗರು ಪಟ್ಟಣಕ್ಕೆ ಬಂದು ಅಭ್ಯಾಸಮಾಡುತ್ತಾರೆ.